**ಕರ್ನಾಟಕ ಸರ್ಕಾರ**

**ಆಯುಕ್ತರಕಾರ್ಯಾಲಯ, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, 1ನೇ ಮಹಡಿ, ಪಶುಪಾಲನಾ ಭವನ, ಪಶುವೈದ್ಯಕೀಯ ಮಹಾವಿದ್ಯಾಲಯದಆವರಣ, ಸಿ.ಬಿ.ಐ ಕಛೇರಿಎದುರು, ಹೆಬ್ಬಾಳ, ಬಳ್ಳಾರಿ ರಸ್ತೆ, ಬೆಂಗಳೂರು-560024.**

**ಪ್ರಕಟಣೆ ಸಂಖ್ಯೆ:ಆಪಸಂ:ಎ-5:ವಿವ-02:2019-20 ಬೆಂಗಳೂರು ದಿನಾಂಕ: 29.01.2020**

**ಅಧಿಸೂಚನೆ**

ವಿಷಯ: **ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಅನುಚ್ಛೇದ 371(ಜೆ) ರಂತೆಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 61 ಭರ್ತಿಯಾಗದೆ ಉಳಿದ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು.**

ಉಲ್ಲೇಖ: 1) **ಕರ್ನಾಟಕ ಪಶುಪಾಲನಾ ಮತ್ತು ಪಶುವೈದ್ಯ ಸೇವೆಗಳು (ಕಲ್ಯಾಣ-ಕರ್ನಾಟಕ ಪ್ರಾದೇಶಿಕ ಸ್ಥಳೀಯ ವೃಂದಗಳಲ್ಲಿನ ಪಶುವೈದ್ಯಾಧಿಕಾರಿಗಳ ನೇಮಕಾತಿ)(ವಿಶೇಷ) ನಿಯಮಗಳು-2019.**

2) **ಸರ್ಕಾರದಅಧಿಸೂಚನೆ ಸಂಖ್ಯೆ:ಪಸಂಮೀ/18/ಪಸಸೇ/2018 ದಿನಾಂಕ:10-12-2019**

*******

1) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಅನುಚ್ಛೇದ 371(ಜೆ)ರಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳಿಯ ವೃಂದದಡಿ 61 ಪಶುವೈದ್ಯಾಧಿಕಾರಿಗಳ ಭರ್ತಿಯಾಗದೆ ಉಳಿದಹುದ್ದೆಗಳನ್ನು ಉಲ್ಲೇಖ(1) ಮತ್ತು (2)ರ ಅದೇಶಗಳಿಗೊಳಪಟ್ಟು, ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಿದೆ. ಪಶುವೈದ್ಯಾಧಿಕಾರಿಗಳ ಹುದ್ದೆಯುಗ್ರೂಪ್ 'ಎ'ನ ಕಿರಿಯ ವೇತನ ಶ್ರೇಣಿಯ ಹುದ್ದೆಯಾಗಿದ್ದು, ವೇತನ ಶ್ರೇಣಿಯು ರೂ.52650-1250-53900-1450-62600-1650-72500-1900-83900-2200-97100 ಆಗಿರುತ್ತದೆ ಹಾಗೂ ಸರ್ಕಾರದಆದೇಶ ಸಂಖ್ಯೆ:ಎಫ್‌ಡಿ(ಎಸ್.ಪಿ.ಎಲ್)/04/ಪಿಇಟಿ/2005 ದಿನಾಂಕ:31-03-2006ರಂತೆ ನೂತನ ಪಿಂಚಣಿಯೋಜನೆಗೆ ಒಳಪಟ್ಟಿರುತ್ತದೆ. ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ)ನಿಯಮಗಳು, 1977 ಅಥವಾಕರ್ನಾಟಕ ಪಶುವೈದ್ಯಕೀಯ ಸೇವೆಗಳು(ಕಲ್ಯಾಣಕರ್ನಾಟಕ ಪ್ರಾದೇಶಿಕ ಸ್ಥಳೀಯ ವೃಂದಗಳಲ್ಲಿನ ಪಶುವೈದ್ಯಾಧಿಕಾರಿಗಳ ನೇಮಕಾತಿ)(ವಿಶೇಷ) ನಿಯಮಗಳು-2019, ಕರ್ನಾಟಕ ನಾಗರೀಕ ಸೇವಾಕಾಯ್ದೆ 1978(ಕರ್ನಾಟಕಕಾಯ್ದೆ 14/1990) ನಿಯಮಗಳ ಅಡಿಯಲ್ಲಿಕಲ್ಪಿಸಲಾಗಿರುವ ನಿಯಮಾವಳಿಗಳೂ ಅನ್ವಯವಾಗುವುದೆಂದು ಭಾವಿಸತಕ್ಕದ್ದು.

2) **ನೇಮಕಾತಿ ವಿಧಾನ**:-

1) ಬಿ.ವಿ.ಎಸ್.ಸಿ/ಬಿ.ವಿ.ಎಸ್.ಸಿ& ಎ.ಹೆಚ್‌ನ ಪದವಿಯಅಂಕಗಳ ಮೆರಿಟ್‌ಆಧಾರಮೇಲೆ ಹಾಗೂ ರೋಸ್ಟರ್ ವಿಧಾನವನ್ನು ಅನುಸರಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.

2) ಸರ್ಕಾರವು ನೇಮಕಾತಿ ಪ್ರಾಧಿಕಾರವಾಗಿರುತ್ತದೆ.

3) ನೇಮಕಾತಿ ನಿಯಮದಂತೆಆಯ್ಕೆಪ್ರಕ್ರಿಯೆಯುಆಯ್ಕೆಸಮಿತಿ ನಿರ್ಣಯಕ್ಕೆ ಒಳಪಟ್ಟಿರುತ್ತದೆ.

4) ಕನ್ನಡ ಭಾಷಾ ಪರೀಕ್ಷೆ ವಿನಾಯಿತಿಇಲ್ಲದವರಿಗೆಕರ್ನಾಟಕ ಲೋಕಸೇವಾ ಆಯೋಗದಿಂದಕಡ್ಡಾಯಕನ್ನಡಭಾಷಾ ಪರೀಕ್ಷೆ ನಡೆಸಲಾಗುವುದು ಹಾಗೂ ಈ ಪರೀಕ್ಷೆಯಲ್ಲಿಉತೀರ್ಣರಾಗುವುದುಕಡ್ಡಾಯವಾಗಿರುತ್ತದೆ. ಆದರೆ, ಈ ಅಂಕಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

5) "ಎಸ್.ಎಸ್.ಎಲ್.ಸಿ" ಅಥವಾಇದಕ್ಕೆತತ್ಸಮಾನವೆಂದುರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟಇತರೆಯಾವುದೇ ಪರೀಕ್ಷೆಯಲ್ಲಿಅಥವಾ ಎಸ್.ಎಸ್.ಎಲ್.ಸಿ. ಪರೀಕ್ಷೆಗಿಂತ ಮೇಲ್ಪಟ್ಟದಯಾವುದೇ ಪರೀಕ್ಷೆಯಲ್ಲಿಕನ್ನಡವನ್ನು ಮುಖ್ಯ ಭಾಷೆಯಾಗಿ, ಅಥವಾ ದ್ವಿತೀಯ ಭಾಷೆಯಾಗಿಅಥವಾಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿತೇರ್ಗಡೆಯಾಗಿರುವಅಥವಾಕರ್ನಾಟಕ ಲೋಕಸೇವಾ ಆಯೋಗದಿಂದಇದೇ ನಿಯಮಗಳಡಿಯಲ್ಲಿ ಈ ಹಿಂದೆ ನಡೆಸಲ್ಪಟ್ಟಕಡ್ಡಾಯಕನ್ನಡ ಭಾಷೆ ಪರೀಕ್ಷೆಯಲ್ಲಿತೇರ್ಗಡೆಯಾಗಿರುವ ಅಭ್ಯರ್ಥಿಗಳು, ಕಡ್ಡಾಯಕನ್ನಡ ಭಾಷಾ ಪರೀಕ್ಷೆಯಲ್ಲಿಉತ್ತೀರ್ಣರಾಗುವುದರಿಂದ ವಿನಾಯಿತಿ ಹೊಂದಿರುತ್ತಾರೆ.

3) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನಕಡ್ಡಾಯವಾಗಿ ಸೂಚನೆಗಳನ್ನು ಓದಿ ಸ್ಪಷ್ಟವಾಗಿ ಅರ್ಥ ಮಾಡಿಕೊಂಡ ನಂತರವೇಆನ್‌ಲೈನ್ ಮೂಲಕ ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಿದ ನಂತರಯಾವುದೇಕಾರಣಕ್ಕೂಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನು ಬದಲಾವಣೆ ಮಾಡಲುಅವಕಾಶವಿರುವುದಿಲ್ಲ. ಬದಲಾವಣೆಕೋರಿಅರ್ಜಿ ಸಲ್ಲಿಸಿದಲ್ಲಿ ಯಾವುದೇ ಪತ್ರ ವ್ಯವಹಾರ ಮಾಡದೇತಿರಸ್ಕರಿಸಲಾಗುವುದು.

1. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:**31.01.2020**.
2. ಅರ್ಜಿ ಸಲ್ಲಿಸಲುಕೊನೆಯ ದಿನಾಂಕ: 29.02.2020 (ಸಂಜೆ 5.30ರವರೆಗೆ).
3. ಶುಲ್ಕವನ್ನು ಪಾವತಿಸಲುಕೊನೆಯ ದಿನಾಂಕ: 04.03.2020 (ಅಂಚೆಕಛೇರಿಕರ್ತವ್ಯದವೇಳೆವರೆಗೆ)

4) **ಮೀಸಲಾತಿ ವಿವರ**:-

**ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ಹುದ್ದೆಗಳಿಗೆ ಮೀಸಲಿರಿಸಿದ ಹುದ್ದೆಗಳ ವರ್ಗೀಕರಣ:**

| ವರ್ಗಗಳು | ಹುದ್ದೆಗೆ ವರ್ಗೀಕರಣ | ಮ.ಅ | ಗ್ರಾ.ಅ | ಮಾ.ಸೈ | ವಿ.ಚೇ.ಅ | ಕ.ಮಾ.ಅ | ಇತರೆ | ಒಟ್ಟು |
|---|---|---|---|---|---|---|---|---|
| ಪಜಾ | 15 | 07 | 04 | 01 | 01* | 01 | 01 | 15 |
| ಪಪಂ | 04 | 01 | 02 | - | 01* | - | - | 04 |
| ಪ್ರವರ್ಗ- I | 02 | - | 01 | - | 01* | - | - | 02 |
| ಪ್ರವರ್ಗ- IIA | 19 | 07 | 04 | 02 | 01* | 01 | 04 | 19 |
| ಪ್ರವರ್ಗ- IIB | 04 | 01 | 02 | - | 01* | - | - | 04 |
| ಪ್ರವರ್ಗ-IIIA | 04 | 01 | 02 | - | - | - | 1 | 04 |
| ಪ್ರವರ್ಗ- IIIB | 02 | - | 01 | - | 01* | - | - | 02 |
| ಸಾಮಾನ್ಯಅರ್ಹತೆ | 11 | 02 | 02 | 06 | 01* | - | - | 11 |
| ಒಟ್ಟು | **61** | **19** | **18** | **09** | **07*** | **02** | **06** | **61** |

**ವಿ.ಸೂ:**

1. ಅಧಿಸೂಚನೆಸಂಖ್ಯೆಆಪಸಂ:ಸಿಬ್ಬಂದಿ-2:ವಿವ-66:2017-18ದಿ:26-12-2017ರಲ್ಲಿ ಪ್ರವರ್ಗವಾರುಭರ್ತಿಯಾಗದೆ ಉಳಿದ ಹುದ್ದೆಗಳಿಗೆ ರೋಸ್ಟರ್ ಬಿಂದು ಅಳವಡಿಸಿದೆ.
2. ಸರ್ಕಾರದಅಧಿಸೂಚನೆ ಸಂಖ್ಯೆWCD:348:PHP:2015 ದಿನಾಂಕ:20-09-2016ರಂತೆ ವಿಶೇಷ ಚೇತನರಿಗೆLow Vision, Locomotor Disablity (OL, BL) ಹಾಗೂ (Hearing Impairment)ಮೀಸಲಾತಿ ನಿಗಿಪಡಿಸಲಾಗಿದೆ.
3. ವಿಶೇಷ ಚೇತನ ಅಭ್ಯರ್ಥಿಗಳಿಗೆ – * (ದೃಷ್ಟಿ ಮಾಂದ್ಯ ಅಭ್ಯರ್ಥಿಗಳಿಗೆ ಮಾತ್ರ.)
4. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣಗಳಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳುವುದು:

| | |
|---|---|
| ಸಾ.ಅ | ಸಾಮಾನ್ಯಅರ್ಹತೆ |
| ಪ.ಜಾ | ಪರಿಶಿಷ್ಟ ಜಾತಿ |
| ಪ.ಪಂ | ಪರಿಶಿಷ್ಟ ಪಂಗಡ |
| ಪ್ರ-1 | ಪ್ರವರ್ಗ-1 |
| 2ಎ | ಪ್ರವರ್ಗ-2ಎ |
| 2ಬಿ | ಪ್ರವರ್ಗ-2ಬಿ |
| 3ಎ | ಪ್ರವರ್ಗ-3ಎ |
| 3ಬಿ | ಪ್ರವರ್ಗ-3ಬಿ |
| ಮಾ.ಸೈ | ಮಾಜಿ ಸೈನಿಕ |
| ಗ್ರಾ.ಅ | ಗ್ರಾಮೀಣಅಭ್ಯರ್ಥಿ |
| ಮ.ಅ | ಮಹಿಳಾ ಅಭ್ಯರ್ಥಿ |
| ಕ.ಮಾ.ಅ | ಕನ್ನಡ ಮಾಧ್ಯಮಅಭ್ಯರ್ಥಿ |
| ಹೈಕ | ಹೈದರಾಬಾದ್-ಕರ್ನಾಟಕ (ಕಲ್ಯಾಣಕರ್ನಾಟಕ) |
| ವಿ.ಚೇ.ಅ | ವಿಶೇಷ ಚೇತನಅಭ್ಯರ್ಥಿ |

ಮೇಲೆ ಕಾಣಿಸಿರುವ ವರ್ಗೀಕರಣವು ಮೀಸಲಾತಿ ಆದೇಶಗಳಲ್ಲಿ ಮಾರ್ಪಾಡುಆದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಪ್ರಸ್ತುತ ಸುತ್ತೋಲೆ ಸಂ:ಸಿಆಸುಇ:16:ಸೇನೇನಿ:2008, ದಿನಾಂಕ:01-09-2008ರ ಸೂಚನೆಯನ್ನುಅನುಸರಿಸಲಾಗುವುದು.

5) **ಅರ್ಜಿ ಶುಲ್ಕ**:-

1. ಸಾಮಾನ್ಯಅರ್ಹತೆ, ಪ್ರವರ್ಗ 2ಎ, 2ಬಿ, 3ಎ, 3ಬಿಗೆ ಸೇರಿದ ಅಭ್ಯರ್ಥಿಗಳಿಗೆ ರೂ.520/-(ಐದುನೂರಇಪ್ಪತ್ತುರೂಪಾಯಿಗಳು) (ಅರ್ಜಿ ಶುಲ್ಕ ರೂ.500/- ಹಾಗೂ ಅಂಚೆ ಸೇವಾ ಶುಲ್ಕ ರೂ 20/-).

2. ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ-1, ಮಾಜಿ ಸೈನಿಕ ಮತ್ತುವಿಶೇಷ ಚೇತನ ಅಭ್ಯರ್ಥಿಗಳಿಗೆ ರೂ.270/- (ಎರಡು ನೂರಎಪ್ಪತ್ತು ರೂಪಾಯಿಗಳು) (ಅರ್ಜಿ ಶುಲ್ಕ ರೂ.250/- ಹಾಗೂ ಅಂಚೆ ಸೇವಾ ಶುಲ್ಕ ರೂ 20/-).

ಅರ್ಜಿಗಳನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಿಅರ್ಜಿ ಶುಲ್ಕವನ್ನು ದಿನಾಂಕ:04.03.2020 ರೊಳಗಾಗಿ (ಅಂಚೆ ಕಛೇರಿಯಕರ್ತವ್ಯದ ಅವಧಿಯೊಳಗೆ) ಕರ್ನಾಟಕರಾಜ್ಯದಯಾವುದೇಇ-ಅಂಚೆ ಕಛೇರಿಗಳಲ್ಲಿ (e-payment Post Office only) ಪಾವತಿಸಲು ಅವಕಾಶ ಕಲ್ಪಿಸಿದೆ. ಈ ಸೌಲಭ್ಯವನ್ನು ಹೊರತುಪಡಿಸಿ ಇತರೆಇನ್ಯಾವುದೇ ವಿಧಾನದಲ್ಲಿ ಸಲ್ಲಿಸುವ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ ಹಾಗೂ ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಒಮ್ಮೆ ಪಾವತಿಸಿದ ಶುಲ್ಕವನ್ನುಯಾವುದೇಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ ಮತ್ತು ನಿಗಧಿಪಡಿಸಿದ ದಿನಾಂಕದ ನಂತರಕಟ್ಟಿದ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ.

6) **ಅರ್ಹತಾ ಷರತ್ತುಗಳು**:-

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಒಬ್ಬಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದ ಹೊರತು ನೇಮಕಾತಿಗೆಅರ್ಹರಾಗುವುದಿಲ್ಲ.
3. ಅಭ್ಯರ್ಥಿಗಳು ಮಾನಸಿಕವಾಗಿ ಮತ್ತುದೈಹಿಕವಾಗಿಆರೋಗ್ಯವಂತರಾಗಿರಬೇಕು ಮತ್ತುಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆಆತಂಕವನ್ನುಂಟುಮಾಡುವ ಸಂಬಂವ ಇರುವಯಾವುದೇದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

7) **ಶೈಕ್ಷಣಿಕ ವಿದ್ಯಾರ್ಹತೆ**:-

1. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಅಂದರೆ ದಿನಾಂಕ: 29.02.2020 ರೊಳಗಾಗಿ ಅಭ್ಯರ್ಥಿಯುಯಾವುದೇ ಪಶುವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯದಿಂದಅಥವಾ ಭಾರತದಲ್ಲಿ ಕಾನೂನು ಮೂಲಕ ಸ್ಥಾಪಿಸಲಾದ ಪಶು ವಿಶ್ವವಿದ್ಯಾಲಯಅಥವಾ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇ.50%ರಷ್ಟು ಅಂಕಗಳೊಂದಿಗೆ ಬಿ.ವಿ.ಎಸ್.ಸಿ. ಅಥವಾ ಬಿ.ವಿ.ಎಸ್.ಸಿ. &ಎ.ಹೆಚ್ ಪದವಿ ಹೊಂದಿರಬೇಕು.
2. ಭಾರತೀಯಪಶುವೈದ್ಯಕೀಯ ಪರಿಷತ್ತಿನಕಾಯ್ದೆ 1984ರ ಅಡಿಯಲ್ಲಿಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನಲ್ಲಿ ನೋಂದಣಿಯಾಗಿರಬೇಕುಹಾಗೂ ಈ ನೋಂದಣಿಯುಚಾಲ್ತಿಯಲ್ಲಿರಬೇಕು.

೮) **ವಯೋಮಿತಿ**:-ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಅಭ್ಯರ್ಥಿಯು ಈ ಕೆಳಕಂಡಂತೆ ಕನಿಷ್ಠ ವಯೋಮಿತಿಯನ್ನು ಹೊಂದಿರತಕ್ಕದ್ದು ಮತ್ತುಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| **ಮೀಸಲಾತಿ** | **ನಿಗದಿಪಡಿಸಿದ ವಯಸ್ಸು** |
|---|---|
| ಸಾಮಾನ್ಯ ವರ್ಗದ ಅಭ್ಯರ್ಥಿಗಳು | ೩೫ ವರ್ಷಗಳು |
| ಪ್ರವರ್ಗ-೨(ಎ)/ಪ್ರವರ್ಗ ೨(ಬಿ)/ಪ್ರವರ್ಗ ೩ಎ ಮತ್ತು ಪ್ರವರ್ಗ-೩(ಬಿ) (ಹಿಂದುಳಿದ ವರ್ಗಗಳು) | ೩೮ ವರ್ಷಗಳು |
| ಪ್ರವರ್ಗ-1/ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ | ೪೦ ವರ್ಷಗಳು |

೯) **ಮೀಸಲಾತಿ ಪ್ರಮಾಣ ಪತ್ರಗಳು**:-

ಮೀಸಲಾತಿಕೋರುವವಎಲ್ಲಾಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರಬೇಕು. ಕೊನೆಯ ದಿನಾಂಕದ ನಂತರ ಪಡೆದಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು. ಆದರೆ ಪ.ಜಾ/ಪ.ಪಂ/ಪ್ರ-1ರ ಅಭ್ಯರ್ಥಿಗಳು ಪಡೆದಿರುವ/ ಪಡೆಯುವ ಪ್ರಮಾಣ ಪತ್ರಗಳು ಜೀವಿತಅವಧಿಯವರೆಗೂಅಥವಾರದ್ದು ಮಾಡುವವರೆವಿಗೂ ಸಿಂಧುತ್ವವನ್ನು ಹೊಂದಿರುವಕಾರಣಇಂತಹ ಪ್ರಮಾಣ ಪತ್ರಗಳನ್ನು ದಿನಾಂಕದ ಮಿತಿಯಿಲ್ಲದೆ ಪರಿಗಣಿಸಲಾಗುವುದು. (ಸರ್ಕಾರದ ಸುತ್ತೋಲೆ ಸಂಖ್ಯೆಎಸ್.ಡಬ್ಲ್ಯೂಡಿ:155:ಬಿ.ಸಿ.ಎ:2011 ದಿನಾಂಕ: 22-02-2012).

10) **ಮೀಸಲಾತಿಕೋರಬಯಸುವ ಅಭ್ಯರ್ಥಿಗಳು**:-

- ಪ.ಜಾ/ಪ.ಪಂ ಅಭ್ಯರ್ಥಿಗಳು ನಮೂನೆ 'ಡಿ'ರಂತೆ(**ಅನುಬಂಧ**-1ರನಮೂನೆಯನ್ವಯಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನುಪಡೆದಿರಬೇಕು).
- ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ 'ಇ' ರಂತೆ(**ಅನುಬಂಧ-2**ರ ನಮೂನೆಯನ್ವಯಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನುಪಡೆದಿರಬೇಕು).
- 2ಎ, 2ಬಿ, 3ಎ, 3ಬಿ, ಅಭ್ಯರ್ಥಿಗಳು ನಮೂನೆ 'ಎಫ್' (**ಅನುಬಂಧ-3**ರ ನಮೂನೆಯನ್ವಯ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು).

**ಟಿಪ್ಪಣಿ: ಮೀಸಲಾತಿಯಡಿಆಯ್ಕೆ ಹೊಂದುವ ಅಭ್ಯರ್ಥಿಗಳ ಜಾತಿ/ಆದಾಯ ಮೀಸಲಾತಿ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರ ನೀಡುವ ಸಿಂಧುತ್ವಕ್ಕೆ ಒಳಪಟ್ಟಿರುತ್ತದೆ.**

11) **ಗ್ರಾಮೀಣಅಭ್ಯರ್ಥಿ**:-

- ಗ್ರಾಮೀಣ ಮೀಸಲಾತಿಯನ್ನುಕೋರುವ ಅಭ್ಯರ್ಥಿಗಳು ಪ್ರಸ್ತುತಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲುಅರ್ಹರು.
- ಗ್ರಾಮೀಣ ಮೀಸಲಾತಿಯನ್ನುಕೋರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಪ್ರವರ್ಗ-1/ 2ಎ, 2ಬಿ,3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2ರಲ್ಲಿ ಸಿಂದುವಾಗಿರುವ (Valid) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.(**ಅನುಬಂಧ-5ರ** ನಮೂನೆಯನ್ವಯ ಪಡೆದಿರಬೇಕು)
- ಗ್ರಾಮೀಣ ಮೀಸಲಾತಿಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-2ರ ಮೀಸಲಾತಿ ಪ್ರಮಾಣ ಪತ್ರದಜೊತೆಗೆ ನಮೂನೆ-1ರಲ್ಲಿ ಅವರ ಮೇಲುಪದರಕ್ಕೆ (ಕ್ರಿಮೀಲೇಯರ್) ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರರವರಿಂದ ಪಡೆದು ಹೊಂದಿರತಕ್ಕದ್ದು. (**ಅನುಬಂಧ-4 ಮತ್ತು 5** ಎರಡನ್ನೂಳಗೊಂಡ ನಮೂನೆಯನ್ವಯ ಪಡೆದಿರಬೇಕು)

**ಸೂಚನೆ:- ಗ್ರಾಮೀಣ ಅಭ್ಯರ್ಥಿಗಳೆಂದು ಮೀಸಲಾತಿ ಸಂಬಂಧಿಸಿದಂತೆ ನಮೂನೆ-2ರ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಸಂಸ್ಥೆಯ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರಿಂದಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿಯೊಂದಿಗೆ ಪಡೆಯಬೇಕು.**

12) **ಕನ್ನಡ ಮಾಧ್ಯಮಅಭ್ಯರ್ಥಿ**:-

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನುಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೂಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಅನುಬಂಧ-6 ರಂತೆ ಪ್ರಮಾಣ ಪತ್ರವನ್ನು ಪಡೆದಿರಬೇಕು.

13) **ಅನುಚ್ಛೇದ 371(ಜೆ) ರಂತೆಕಲ್ಯಾಣಕರ್ನಾಟಕ ಪ್ರದೇಶಕ್ಕೆ ಸೇರಿದ ಮೀಸಲಾತಿ**:-

ಕರ್ನಾಟಕ ಸಾರ್ವಜನಿಕಉದ್ಯೋಗ (ಕಲ್ಯಾಣಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನುಕೋರುವ ಅಭ್ಯರ್ಥಿಗಳು **ಅನುಬಂಧ**-ಎರಲ್ಲಿ ಸೂಚಿಸಿರುವ ನಮೂನೆಯಲ್ಲಿಯೇಅರ್ಹ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧ ಪಟ್ಟ ಉಪ ವಿಭಾಗದ ಸಹಾಯಕಆಯುಕ್ತರಿಂದ ಸಹಿ ಮೊಹರು ಮತ್ತುಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು, ಪ್ರಮಾಣ ಪತ್ರದ ನಮೂನೆಯನ್ನು**ಅನುಬಂಧ**-7ರಲ್ಲಿಅರ್ಹತಾ ಪ್ರಮಾಣ ಪತ್ರವನ್ನುತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆಯಾವುದೇನಮೂನೆಯಲ್ಲಿ ಪಡೆಯಲಾದಅರ್ಹತಾ ಪ್ರಮಾಣ ಪತ್ರವನ್ನುಪರಿಗಣಿಸಲಾಗುವುದಿಲ್ಲ.

14) **ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆಮೀಸಲಾತಿಕೋರುವ ಸರ್ಕಾರಿ ನೌಕರರು**:-

ಈ ಮೀಸಲಾತಿಕೋರುವ ಅಭ್ಯರ್ಥಿಗಳು ಅರ್ಹತಾ ಪ್ರಮಾಣ ಪತ್ರದಜೊತೆಗೆ ಸ್ವಗ್ರಾಮ ಪ್ರಮಾಣ ಪತ್ರವನ್ನು, ಕಲ್ಯಾಣಕರ್ನಾಟಕಉಪನಿಯಮ 5(2)ರಂತೆ ನೇಮಕಾತಿ ಪ್ರಾಧಿಕಾರಿಗಳಿಂದ ನಿರಾಕ್ಷೇಪಣಾ (NOC) ಪಡೆದಿಟ್ಟುಕೊಂಡು, ಆಯ್ಕೆ ಪ್ರಾಧಿಕಾರವು ಅಪೇಕ್ಷಿಸಿದಲ್ಲಿ ಸಲ್ಲಿಸತಕ್ಕದ್ದು.

**ಟಿಪ್ಪಣಿ:-ವಿವಿಧ ಮೀಸಲಾತಿಕೋರಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರು ಪಡಿಸದಿದ್ದಲ್ಲಿ: ಆ ಮೀಸಲಾತಿಯನ್ನುರದ್ದುಪಡಿಸಲಾಗುತ್ತದೆ. ಸಾಮಾನ್ಯಅರ್ಹತೆಯಲ್ಲಿಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯಅರ್ಹತೆಯಅಭ್ಯರ್ಥಿಯೆಂದು ಪರಿಗಣಿಸಲಾಗುವುದು, ಇಲ್ಲವಾದಲ್ಲಿಅಭ್ಯರ್ಥಿತ್ವವನ್ನುರದ್ದುಪಡಿಸಲಾಗುವುದು.**

15) **ಮಾಜಿ ಸೈನಿಕ**:-

ಸರ್ಕಾರದಅಧಿಸೂಚನೆಯ ಸಂಖ್ಯೆ:ಡಿಪಿಎಆರ್ 13 ಎಸ್ಆರ್ಆರ್ 92, ದಿನಾಂಕ 01-04-1992 ಮತ್ತುಅಧಿಸೂಚನೆಯ ಸಂಖ್ಯೆ:ಡಿಪಿಎಆರ್ 28 ಎಸ್ಆರ್ಆರ್ 95, ದಿನಾಂಕ:21-10-1995ರನ್ವಯ ನೇರ ನೇಮಕಾತಿಗಳಲ್ಲಿ ಶೇಕಡ 10%ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗೆ ಮೀಸಲಾತಿಕಲ್ಪಿಸಲಾಗಿದೆ. ಕರ್ನಾಟಕರಾಜ್ಯ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿದ್ದಂತೆ ಮಾಜಿ ಸೈನಿಕರ ವಿವರಣೆ ಕೆಳಕಂಡಂತಿದೆ.

1. ಮಾಜಿ ಸೈನಿಕ ಎಂದರೆಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧಅಥವಾಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿಆದರೆಡಿಫೆನ್ಸ್ ಸೆಕ್ಯುರಿಟಿಕೋರ್, ಜನರಲ್‌ರಿಸರ್ವ್‌ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ; ಮತ್ತು
2. ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗಕೊಲ್ಲಲ್ಪಟ್ಟಅಥವಾ ಶಾಶ್ವತವಾಗಿದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿಅಥವಾಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆಅರ್ಹರಾಗಿರುತ್ತಾರೆಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.
   1. ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ. ಅಥವಾ
   2. ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯಅಥವಾಅಸಾಮಾರ್ಥ್ಯದ ಪಿಂಚಣಿ ಪಡೆದುಅಂತಹ ಸೇವೆಯಿಂದ ಬಿಡುಗಡೆಯಾದವನು.
   3. ಸ್ವಂತಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ. ಅಥವಾ
   4. ತನ್ನ ಸ್ವಂತಕೋರಿಕೆ ಮೇರೆಗೆಅಥವಾದುರ್ನಡತೆಅಥವಾಅಸಾಮರ್ಥ್ಯದಕಾರಣದಿಂದಾಗಿತೆಗೆದು ಹಾಕಿರುವಅಥವಾಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ಧಿಷ್ಟಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತುಗ್ರಾಚ್ಯೂಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು:-
      I. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು.
      II. ಮಿಲಿಟರಿ ಸೇವೆಯಿಂದಾಗಿಉಂಟಾದದೈಹಿಕಅಸಮರ್ಥತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
      III. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

**ವಿವರಣೆ:-** ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ "ಮಾಜಿ ಸೈನಿಕ"ನೆಂಬ ವರ್ಗದಡಿ ಬರುವ ವ್ಯಕ್ತಿಗೆ ನಿರ್ದಿಷ್ಟಒಪ್ಪಂದವು ಪೂರ್ಣವಾಗಲುಒಂದು ವರ್ಷಕ್ಕೆ ಮುನ್ನ ಪುನರ್‌ಉದ್ಯೋಗಕ್ಕೆಅರ್ಜಿ ಹಾಕಿ ಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆದೊರೆಯುವಎಲ್ಲಾ ಸೌಲಭ್ಯಗಳನ್ನು ಹೊಂದಲುಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನುತ್ಯಜಿಸಲುಅನುಮತಿ ನೀಡುವವರೆಗೆರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ. ಇಂತಹವರುಅರ್ಜಿ ಸಲ್ಲಿಸುವ ಮುನ್ನ ಸೇನೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಬೇಕು. ಸೇನೆಯಿಂದ ಬಿಡುಗಡೆಯಾದ ವ್ಯಕ್ತಿಗಳು ಅವರ ಬಿಡುಗಡೆ ಪ್ರಮಾಣ ಪತ್ರವನ್ನು / ಮಾಜಿ ಸೈನಿಕರಅವಲಂಬಿತರು ಮಾಜಿ ಸೈನಿಕರು ಸೇವೆಯಲ್ಲಿದ್ದಾಗಕೊಲ್ಲಲ್ಪಟ್ಟಿರುವ / ಶಾಶ್ವತವಾಗಿಅಂಗವಿಕಲರಾದ ಬಗ್ಗೆ ಪ್ರಮಾಣ ಪತ್ರವನ್ನು ಮೂಲ ದಾಖಲಾತಿ ಪರಿಶೀಲನೆಗೆ ತಪ್ಪದೇ ಹಾಜರುಪಡಿಸಬೇಕು. ಈ ಪ್ರಮಾಣ ಪತ್ರದ ನಮೂನೆಯನ್ನು**ಅನುಬಂಧ**-8ರಲ್ಲಿತೋರಿಸಲಾಗಿದೆ.

ಟಿಪ್ಪಣಿ:- ಸೈನಿಕರ ಸೇವಾ ಒಪ್ಪಂದದ ಮುಕ್ತಾಯಕ್ಕೆ ಮುನ್ನಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅವರ ಮೇಲಾಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದುಅದರ ದಿನಾಂಕವನ್ನುಅರ್ಜಿಯಲ್ಲಿ ನಮೂದಿಸಬೇಕು ಹಾಗೂ ಮೂಲ ದಾಖಲಾತಿಗಳ ಪರಿಶೀಲನೆ ಸಮಯದಲ್ಲಿಅದನ್ನುಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

16) **ವಿಶೇಷಚೇತನಅಭ್ಯರ್ಥಿ**:-

ಸರ್ಕಾರದಅಧಿಸೂಚನೆಸಂಖ್ಯೆಡಿಪಿಎಆರ್:50:ಎಸ್‌ಆರ್‌ಆರ್:2000 ದಿನಾಂಕ:03-09-2005ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ- "ಎ" ಮತ್ತು "ಬಿ" ಗುಂಪಿನ ಹುದ್ದೆಗಳಿಗೆ ಶೇಕಡ 3% ರಷ್ಟು ಮತ್ತು ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5% ರಷ್ಟು ಹುದ್ದೆಗಳನ್ನು ವಿಶೇಷಚೇತನರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40% ಕ್ಕಿಂತಕಡಿಮೆಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನುಕೋರಲುಅರ್ಹರು ಸರ್ಕಾರದಅಧಿಕೃತಜ್ಞಾಪನ ಸಂಖ್ಯೆಸಿಆಸುಇ 115 ಸೆನೆನಿ 2005 ದಿನಾಂಕ:19-11-2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿಅಂಗವಿಕಲತೆ ಬಗ್ಗೆ ಸರ್ಕಾರದಆದೇಶ ಸಂಖ್ಯೆಮಮಇ/65/ಪಿಹೆಚ್‌ಪಿ/2010 ದಿನಾಂಕ:18-02-2011ರಂತೆ ಪ್ರಾಥಮಿಕಆರೋಗ್ಯಕೇಂದ್ರದಲ್ಲಿಯ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ/ ಬೆಂಗಳೂರು ವೈದ್ಯಕೀಯ ಪ್ರಾಧಿಕಾರಇವರಿಂದ ಪ್ರಮಾಣ ಪತ್ರವನ್ನುಅರ್ಜಿಸಲ್ಲಿಸಲುನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿಅಂತಹ ಅಭ್ಯರ್ಥಿಗಳ ವಿಶೇಷಚೇತನಮೀಸಲಾತಿಯನ್ನುರದ್ದುಪಡಿಸಲಾಗುವುದು. ಇತರೆಯಾವುದೇ ನಮೂನೆಯಲ್ಲಿಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು / ಗುರುತಿನಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. (ಈ ಪ್ರಮಾಣ ಪತ್ರದ ನಮೂನೆಯನ್ನು**ಅನುಬಂಧ-9**ರಲ್ಲಿತೋರಿಸಲಾಗಿದೆ).

17) **ಸೇವಾನಿರತಅಭ್ಯರ್ಥಿ**:-

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 5(4)ರನ್ವಯ "ಯಾರೇಅರ್ಜಿದಾರರುತಾವುಅರ್ಜಿ ಸಲ್ಲಿಸುವ ಸಮಯದಲ್ಲಿ ಸರ್ಕಾರದಯಾವುದೇಇತರೆಇಲಾಖೆಯಲ್ಲಿಅಥವಾಯಾವುದೇಇತರರಾಜ್ಯ ಸರ್ಕಾರವುಅಥವಾಕೇಂದ್ರ ಸರ್ಕಾರವು ಈ ಸಂಬಂಧವಾಗಿ ನಿರ್ದಿಷ್ಠ ಪಡಿಸಿದ ಯಾವುದೇಇತರ ಪ್ರಾಧಿಕಾರದಲ್ಲಿಖಾಯಂಅಥವಾತಾತ್ಕಾಲಿಕ ನೌಕರಿಯಲ್ಲಿದ್ದರೆ ಮತ್ತುಆತನುಯಾರಅಧೀನದಲ್ಲಿಉದ್ಯೋಗದಲ್ಲಿರುವನೋ ಆ ಇಲಾಖಾ ಮುಖ್ಯಸ್ಥರಿಂದಅಥವಾ ಸಂದರ್ಭಾನುಸಾರ ಸರ್ಕಾರದಿಂದಅಥವಾ ಪ್ರಾಧಿಕಾರದಿಂದಒಪ್ಪಿಗೆ ಪಡೆಯದೆಯೇಅರ್ಜಿಯನ್ನು ಸಲ್ಲಿಸಿದ್ದರೆ ಆತನು ಸರ್ಕಾರದಯಾವುದೇಇಲಾಖೆಯಲ್ಲಿನ ಹುದ್ದೆಯ ನೇಮಕಕ್ಕೆ ಅರ್ಹರಾಗುವುದಿಲ್ಲ. ಪರಂತು, ಈ ಉಪ ನಿಯಮವು ಸರ್ಕಾರದಯಾವುದೇಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ನೇಮಕಗೊಂಡಿರುವ ವ್ಯಕ್ತಿಗೆಅವನನ್ನುಎಲ್ಲಿಯವರೆಗೆ ಹಾಗೆಂದು ಪರಿಗಣಿಸಲಾಗುವುದೋಅಲ್ಲಿಯವೆರೆಗೆಅನ್ವಯವಾಗುವುದಿಲ್ಲ.

ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು, ಇದೇ ಪ್ರಮಾಣ ಪತ್ರದ ಪ್ರತಿಯನ್ನು ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿತಪ್ಪದೇ ಹಾಜರುಪಡಿಸತಕ್ಕದ್ದು. ನಿರಾಕ್ಷೇಪಣಾ(NOC) ಪ್ರಮಾಣ ಪತ್ರವನ್ನು ಹಾಜರುಪಡಿಸದಿದ್ದಲ್ಲಿಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು. ಈ ಪ್ರಮಾಣ ಪತ್ರದ ನಮೂನೆಯನ್ನು**ಅನುಬಂಧ-10**ರಲ್ಲಿತೋರಿಸಲಾಗಿದೆ.

ಸೈನಿಕರ ಸೇವಾ ಒಪ್ಪಂದದ ಮುಕ್ತಾಯಕ್ಕೆ ಮುನ್ನಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅವರ ಮೇಲಾಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದುಅದರ ದಿನಾಂಕವನ್ನುಅರ್ಜಿಯಲ್ಲಿ ನಮೂದಿಸಬೇಕೆಂದು ಹಾಗೂ ಮೂಲ ದಾಖಲೆಗಳಲ್ಲಿನ ಪರಿಶೀಲನಾ ಸಮಯದಲ್ಲಿಅದನ್ನುಕಡ್ಡಾಯವಾಗಿ ಹಾಜರುಪಡಿಸಬೇಕು.

18) **ಆಯ್ಕೆ ಪ್ರಾಧಿಕಾರದೊಡನೆ ಪತ್ರ ವ್ಯವಹಾರ:-**

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಆಯ್ಕೆ ಪ್ರಾಧಿಕಾರವುಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂಯಾವುದಾದರೂತಾಂತ್ರಿಕ ಸಮಸ್ಯೆಉಂಟಾದಲ್ಲಿ ಈ ಕೆಳಕಂಡ ಸಹಾಯವಾಣಿ(HELP

LINE) ಸಂಪರ್ಕಿಸತಕ್ಕದ್ದು. ಅಭ್ಯರ್ಥಿಯು ಮಾಹಿತಿಗಾಗಿ ಸಂಪರ್ಕಿಸುವ ಸಮಯದಲ್ಲಿ ಈ ಹುದ್ದೆಗೆ ಸಲ್ಲಿಸಿದ ಅರ್ಜಿಯಕ್ರಮಸಂಖ್ಯೆ, ಜನ್ಮದಿನಾಂಕ, ಇತ್ಯಾದಿ ವಿವರಗಳನ್ನು ನೀಡತಕ್ಕದ್ದು.

19) **ಆನ್ ಲೈನ್‌ನಲ್ಲಿಅರ್ಜಿ ಸಲ್ಲಿಸುವ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದದೂರವಾಣಿ ಸಂಖ್ಯೆಗಳು:-**

**ಸಹಾಯವಾಣಿ:** On-line ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿಯಾವುದಾದರೂತಾಂತ್ರಿಕತೊಂದರೆಅಥವಾ ಸಮಸ್ಯೆಎದುರಾದಲ್ಲಿ ಸಹಾಯವಾಣಿ (HELP LINE) ನಂ.1800 425 00 12 ಮತ್ತು 080 23417100 ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದುಅರ್ಜಿ ಸಲ್ಲಿಸಬಹುದು.

20) **ವಿಶೇಷ ಸೂಚನೆಗಳು:-**

1. ಅಭ್ಯರ್ಥಿಯುಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಹಾಗೂ **ಕಪ್ಪು ಶಾಹಿಯ** ಸ್ಕೆಚ್/ಮಾರ್ಕರ್ ಪೆನ್‌ನಲ್ಲಿ ಬಿಳಿಹಾಳೆಯ ಮೇಲೆ ಸಹಿ ಮಾಡಿ ಅವುಗಳನ್ನು ನಿಗಧಿಪಡಿಸಿದ ಅಳತೆಯಲ್ಲಿಯೇ ಸ್ಕ್ಯಾನ್ ಮಾಡಿಅರ್ಜಿಗೆಅಪ್-ಲೋಡ್ (UPLOAD)ಮಾಡಬೇಕು ಹಾಗೂ ಭಾವಚಿತ್ರ ಹಾಗೂ ಸಹಿಯನ್ನುಅಪ್-ಲೋಡ್ (UPLOAD) ಮಾಡದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
2. ಅಭ್ಯರ್ಥಿಯು ಸಂಬಂಧಿಸಿದ ಎಲ್ಲಾ ಪ್ರಮಾಣ ಪತ್ರಗಳನ್ನು ನಿಗಧಿತ ನಮೂನೆಯಲ್ಲಿONLINE ಮೂಲಕ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಪಡೆದಿಟ್ಟುಕೊಳ್ಳಬೇಕು
3. ಅಭ್ಯರ್ಥಿಯುಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಆ ಸಮಯದಲ್ಲಿಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳನ್ನು ಹಾಜರು ಪಡಿಸಬೇಕು.
4. ಅಭ್ಯರ್ಥಿಯು ಮೇಲಿನ ಕ್ರ.ಸಂ. (1) ರಿಂದ (3) ರವರೆಗಿನ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆ ಸಮಯದಲ್ಲಿ ಹಾಜರು ಪಡಿಸದೇಇದ್ದಲ್ಲಿಅವರಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುವುದು.

21) ಅಭ್ಯರ್ಥಿಯು ಈ ಕೆಳಕಾಣಿಸಿದ ಮೂಲದಾಖಲಾತಿಗಳನ್ನು ಅರ್ಜಿಸಲ್ಲಿಸುವಕೊನೆಯ ದಿನಾಂಕಕ್ಕೆ ಮೊದಲು ಪಡೆದಿಟ್ಟುಕೊಳ್ಳತಕ್ಕದ್ದು ಹಾಗೂ ಪರಿಶೀಲನೆಗೆಅರ್ಹರಾದ ಅಭ್ಯರ್ಥಿಗಳು ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು;

1) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾತತ್ಸಮಾನ ಪರೀಕ್ಷೆಯಅಂಕಪಟ್ಟಿ.
2) ಬಿ.ವಿ.ಎಸ್‌ಸಿ / ಬಿ.ವಿ.ಎಸ್‌ಸಿ ಅಂಡ್‌ಎಹೆಚ್ ಪದವಿಯಎಲ್ಲಾ ವರ್ಷಗಳ (ಸೆಮಿಸ್ಟರ್) ಅಂಕಪಟ್ಟಿಗಳು ಹಾಗೂ ಪ್ರಾವಿಜನಲ್‌ಡಿಗ್ರಿ ಪ್ರಮಾಣ ಪತ್ರ/ಘಟಿಕೋತ್ಸವ ಪದವಿ ಪ್ರಮಾಣ ಪತ್ರಗಳು.
3) ಸಂಬಂಧಪಟ್ಟ ವಿಶ್ವವಿದ್ಯಾನಿಲಯ ನೀಡಿರುವ ತ್ರೈಮಾಸಿಕ ಪದ್ಧತಿಯಅಂಕಪಟ್ಟಿಯ ಪರಿವರ್ತಕ ಕೋಷ್ಟಕ ಪ್ರಮಾಣ ಪತ್ರ (ಸರ್ಟಿಫಿಕೇಟ್‌ಗಳು)(CGPA)

   (Trimester system's Marks card conversion certificate issued by the concerned University)
4) ಚಾಲ್ತಿಯಲ್ಲಿರುವಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನ ನೋಂದಣಿ ಪ್ರಮಾಣ ಪತ್ರ.
5) ಹುದ್ದೆಗೆ ನಿಗದಿಪಡಿಸಿದ ಶುಲ್ಕವನ್ನುಇ-ಅಂಚೆ ಕಛೇರಿಯಲ್ಲಿ ಪಾವತಿಸಿದ ಚಲನ್ ಪ್ರತಿ.
6) ಸೈನಿಕ ಸೇವೆಯಿಂದ ಬಿಡುಗಡೆಯಾದ ಪ್ರಮಾಣ ಪತ್ರ ಮತ್ತು ಪಿಂಚಣಿ/ಗ್ರಾಚ್ಯುಟಿ ಪಡೆಯುತ್ತಿರುವ ಪ್ರಮಾಣ ಪತ್ರ / ಮಾಜಿ ಸೈನಿಕ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿದ್ದಲ್ಲಿಅಥವಾಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ ಅನುಬಂಧಿಸಿರುವ ನಮೂನೆಯಲ್ಲಿ (ಮಾಜಿ ಸೈನಿಕ ಮೀಸಲಾತಿಕೋರಿದ್ದಲ್ಲಿ)
7) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿಕೋರಿದ್ದಲ್ಲಿ).
8) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2ರಲ್ಲಿ (ಸಾಮಾನ್ಯಅರ್ಹತೆ/ಗ್ರಾಮೀಣ ಮೀಸಲಾತಿಕೋರಿದ ಅಭ್ಯರ್ಥಿಗಳು) (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ಪ್ರವರ್ಗ-2ಎ/ಪ್ರವರ್ಗ-2ಬಿ/ಪ್ರವರ್ಗ-3ಎ/ಪ್ರವರ್ಗ-3ಬಿ ಮೀಸಲಾತಿಯೊಂದಿಗೆಗ್ರಾಮೀಣ ಮೀಸಲಾತಿಕೋರಿದ ಅಭ್ಯರ್ಥಿಗಳು ನಮೂನೆ-2ರಲ್ಲಿ ಮಾತ್ರ. (ಮೀಸಲಾತಿಕೋರಿದ್ದಲ್ಲಿ).
9) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿಕೋರಿದ್ದಲ್ಲಿ)
10) ಕಲ್ಯಾಣ-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಅರ್ಹತಾ ಪ್ರಮಾಣ ಪತ್ರ.
11) ಸ್ವಗ್ರಾಮ ಪ್ರಮಾಣ ಪತ್ರ (ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಕಲ್ಯಾಣ-ಕರ್ನಾಟಕ ಮೀಸಲಾತಿಕೋರಿದ್ದಲ್ಲಿ)
12) ಆನ್-ಲೈನ್ (ONLINE) ಮೂಲಕ ಅರ್ಜಿ ಸಲ್ಲಿಸುವಾಗಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರಅದರಒಂದು ಪ್ರತಿಯನ್ನುಡೌನ್‌ಲೋಡ್ ಮಾಡಿಕೊಂಡು ಮತ್ತು ಶುಲ್ಕ ಪಾವತಿಯ ಚಲನ್‌ಅನ್ನು ಹಾಗೂ ಎಲ್ಲಾ ದಾಖಲಾತಿಗಳನ್ನು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿತೆಗೆದಿಟ್ಟುಕೊಂಡಿತಕ್ಕದ್ದು.
13) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ/ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲುಕೊನೆಯ ದಿನಾಂಕದೊಳಗೆ ನಿಗದಿತ ನಮೂನೆಯಲ್ಲಿಅನುಮತಿಯನ್ನು / ಸೇವಾ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸೇವಾ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಬೇಕು. ಮೂಲ ದಾಖಲಾತಿಯ ಪರಿಶೀಲನೆಯ ಸಮಯದಲ್ಲಿ ಮೂಲ ನಿರಾಕ್ಷೇಪಣೆ / ಸೇವಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುವುದು. ಕ್ರೋಢೀಕೃತ ನಿರಾಕ್ಷೇಪಣೆ ಪ್ರಮಾಣ ಪತ್ರ (NOC)ಪಡೆದಂತಹ ಅಭ್ಯರ್ಥಿಗಳು ಅವರ ನೇಮಕಾತಿ ಪ್ರಾಧಿಕಾರದ ಸಹಿ/ಮೊಹರಿನೊಂದಿಗೆದೃಢೀಕರಣ ಪಡೆದು ಸಲ್ಲಿಸಬೇಕು.
14) ಅಭ್ಯರ್ಥಿಗಳು ಇಲಾಖಾ ವೆಬ್-ಸೈಟ್www.ahvs.kar.nic.in ಅನ್ನು ಹಾಗೂಎಸ್.ಎಂ.ಎಸ್‌ಅನ್ನು ಕಾಲಕಾಲಕ್ಕೆ ಗಮನಿಸತಕ್ಕದ್ದು.

22) **ದುರ್ನಡತೆ:-**

ಒಬ್ಬಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದುಅಥವಾಖೋಟಾದಸ್ತಾವೇಜುಅಥವಾತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದುಅಥವಾತಪ್ಪುಅಥವಾ ಸುಳ್ಳು ಹೇಳಿಕೆ ನೀಡಿರುವನೆಂದುಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದುಕಂಡುಬಂದಲ್ಲಿ ಹಾಗೂ ಆಯ್ಕೆ ಪ್ರಾಧಿಕಾರದಿಂದ ನೀಡಲಾದಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದುಅಥವಾ ಅವನು ನೇಮಕಾತಿಯ ಸಂಬಂಧದಲ್ಲಿಯಾವುದೇಇತರೆಅಕ್ರಮ ಮತ್ತುಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿಅಭ್ಯರ್ಥಿಯು ಸ್ವತಃಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುತ್ತಾನೆ ಅಲ್ಲದೆಈ ಬಗ್ಗೆ ಆಯ್ಕೆ ಪ್ರಾಧಿಕಾರದತೀರ್ಮಾನವೇಅಂತಿಮವಾಗಿರುತ್ತದೆ.

**ಜಂಟಿ ನಿರ್ದೇಶಕರು (ಆಡಳಿತ)**
**ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ**
**ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿ**
**ಇಲಾಖಾ ಆಯ್ಕೆ ಸಮಿತಿ**
**ಬೆಂಗಳೂರು – 560 024**

**ಆಯುಕ್ತರು**
**ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ**
**ಹಾಗೂ ಪದನಿಮಿತ್ತಅಧ್ಯಕ್ಷರು, ಇಲಾಖಾ ಆಯ್ಕೆ ಸಮಿತಿ**
**ಬೆಂಗಳೂರು – 560 024**

ಅನುಬಂಧ–1

(ಪ.ಜಾ / ಪ.ಪಂಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)
ನಮೂನೆ–ಡಿ
(ನಿಯಮ 3ಎ (2) (3) ನೋಡಿ)
ಅನುಸೂಚಿತಅಥವಾಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ)ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ
ಪ್ರಮಾಣ ಪತ್ರ

..........................ರಾಜ್ಯದ / ಕೇಂದ್ರಾಡಳಿತ ಪ್ರದೇಶದ * ____________..____ ಜಿಲ್ಲೆಯ / ವಿಭಾಗದ ____________________.____.. ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ ______________________.. ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ __________________ ಇವರುಅನುಸೂಚಿತಜಾತಿ / ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಿದೆ.

ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
ಸಂವಿಧಾನ (ಅನುಸೂಚಿತಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ,1950
ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತಜಾತಿ ಮತ್ತುಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ತ್ಯಾಜ್ಯ ಪುನರ್‌ರಚನಾಅಧಿನಿಯಮ, 1960, ಪಂಜಾಬ್‌ರಾಜ್ಯ ಪುನರ್‌ರಚನಾಅಧಿನಿಯಮ, 1966, ಹಿಮಾಚಲ ಪ್ರದೇಶರಾಜ್ಯಅಧಿನಿಯಮ, 1970 ಮತ್ತುಈಶಾನ್ಯ ಪ್ರದೇಶಗಳ (ಪುನರ್‌ರಚನಾಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ)

ಸಂವಿಧಾನ
ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ 1962
ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತಜಾತಿ / ಬುಡಕಟ್ಟುಗಳ ಆದೇಶ 1988
ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ / ಶ್ರೀಮತಿ / ಕುಮಾರಿ * ________________________________ ಮತ್ತು / ಅಥವಾ ಅವನ * /ಅವಳ * ಕುಟುಂಬವು ____________________________________ರಾಜ್ಯ / ಕೇಂದ್ರಾಡಳಿತ ಪ್ರದೇಶದ ______________________________________.ಜಿಲ್ಲಾ/ವಿಭಾಗದ __________________.ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ(ಗಳು)

ಸಹಿ__________________________

ತಹಸೀಲ್ದಾರ್______________________

ಸ್ಥಳ:–                                        ಪದನಾಮ

ದಿನಾಂಕ:–                                        ಕಛೇರಿಯ ಮೊಹರಿನೊಂದಿಗೆ

**ಅನುಬಂಧ–2**

**ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ**

**ನಮೂನೆ–ಇ**

**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

_________________ ಗ್ರಾಮ / ಪಟ್ಟಣದ / ನಗರ ನಿವಾಸಿಯಾದ ಶ್ರೀ / ಶ್ರೀಮತಿ ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ _________________ ಇವರು ಹಿಂದುಳಿದ ವರ್ಗಗಳ (ಪ್ರವರ್ಗ) ಜಾತಿಯ _________________ ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:– ತಹಸೀಲ್ದಾರ್
ದಿನಾಂಕ:

ತಾಲ್ಲೂಕು
ಕಛೇರಿಯ ಮೊಹರು

ಅನುಬಂಧ-3

(ಪ್ರವರ್ಗ-2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ- ಎಫ್

(ನಿಯಮ 3ಎ (2) (3)ನ್ನು ನೋಡಿ)
ಹಿಂದುಳಿದ ವರ್ಗಗಳಿಗೆ (2ಎ, 2ಬಿ, 3ಎ, 3ಬಿ) ಸೇರಿದಅಭ್ಯರ್ಥಿಗೆ ನೀಡುವ
ಆದಾಯ ಮತ್ತುಜಾತಿ ಪ್ರಮಾಣ ಪತ್ರ

ರಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ / ಶ್ರೀಮತಿ / ಕುಮಾರಿಇವರು ಮತ್ತುಆತನ / ಅವಳ ತಂದೆ / ತಾಯಿ / ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ:ಎಸ್.ಡಬ್ಲು ಡಿ 225 ಬಿಸಿಎ 2000 ದಿನಾಂಕ:30-03-2002ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ತರದ (ಕ್ರಿಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು;

ಅಭ್ಯರ್ಥಿಯಾಗಲಿ ಅಥವಾಆತನ / ಆಕೆಯತಂದೆತಾಯಿ / ಪೋಷಕರಾಗಲ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯಅಥವಾ 2ನೇ ದರ್ಜೆಯಅಧಿಕಾರಿಯಾಗಿಲ್ಲವೆಂದು;

ಅಥವಾ

ಸಾರ್ವಜನಿಕ ವಲಯಉದ್ಯಮದಲ್ಲಿತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ.6000-12000/- ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು;

ಅಥವಾ

ಆತನ / ಆಕೆಯತಂದೆತಾಯಿ / ಪೋಷಕರು / ಪತ್ನಿ /ಪತಿಯಆದಾಯವುಎರಡು ಲಕ್ಷ ಮೀರುವುದಿಲ್ಲವೆಂದು;

ಅಥವಾ

ಕರ್ನಾಟಕ ಭೂಸುಧಾರಣಾಅಧಿನಿಯಮ 1961ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯತಂದೆತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟತೆರಿಗೆದಾರನಲ್ಲಅಥವಾಆತನ / ಆಕೆಯತಂದೆತಾಯಿ / ಪೋಷಕ ಪತ್ನಿ / ಪತಿಯುಅಥವಾಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿಅಥವಾ 25 ಎಕರೆಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿಆದೇಶ ಸಂಖ್ಯೆ:ಎಸ್‌ಡಬ್ಲುಡಿ 225 ಬಿಸಿಎ 2000 ದಿನಾಂಕ: 30-03-2002ರ ಅನ್ವಯ ಶ್ರೀ / ಶ್ರೀಮತಿ/ ಕುಮಾರಿಇವರುಜಾತಿಗೆ ಸೇರಿದ ಉಪ ಜಾತಿಯವರಾಗಿದ್ದು ಸರ್ಕಾರಿಆದೇಶ ಸಂಖ್ಯೆ: ಎಸ್‌ಡಬ್ಲುಡಿ 225 ಬಿಸಿಎ 2000 ದಿನಾಂಕ:30-03-2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ (2ಎ, 2ಬಿ, 3ಎ, 3ಬಿ)ಕ್ಕೆ ಸೇರಿರುತ್ತಾರೆ.

ಸ್ಥಳ: ತಹಸೀಲ್ದಾರ್
ದಿನಾಂಕ: ತಾಲ್ಲೂಕು
ಕಛೇರಿಯ ಮೊಹರು

ಸೂಚನೆ:

1.ಸರ್ಕಾರದ ಆದೇಶ ಸಂಖ್ಯೆ:ಹಿಂವಕ:148:ಬಿಸಿಎ:2015 ದಿನಾಂಕ:04-06-2015ರಂತೆ ಹಿಂದುಳಿದ ವರ್ಗಗಳ ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗಳಿಗೆ ಅನ್ವಯಿಸುವಂತೆಕೆನೆಪದರಕ್ಕೆ ನಿಗದಿಪಡಿಸಿರುವ ಅಭ್ಯರ್ಥಿಯ ಮತ್ತುಅವರತಂದೆ-ತಾಯಿ, ಪೋಷಕರ ವಾರ್ಷಿಕಒಟ್ಟುಆದಾಯ ಮಿತಿಯನ್ನು ರೂ.4.50 ಲಕ್ಷಗಳಿಂದ ರೂ.6.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಆದುದರಿಂದ, ಮೀಸಲಾತಿಪ್ರಮಾಣ ಪತ್ರವನ್ನು ನೀಡುವಅಧಿಕೃತಅಧಿಕಾರಿಯು ದಿನಾಂಕ:04-06-2015ರ ಸರ್ಕಾರಿಆದೇಶದಲ್ಲಿನ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ನೀಡತಕ್ಕದ್ದು.

2. ಈ ಮೇಲೆ ಹೇಳಲಾದ ಸರ್ಕಾರಿಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಸದರಿ ಮೀಸಲಾತಿಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಅದರಂತೆಜಾತಿ / ಮೀಸಲಾತಿ ಪ್ರಮಾಣ ಪತ್ರಗಳನ್ನು ಮಾಡಿಸಲು ಸೂಚಿಸಿದೆ.

ಅನುಬಂಧ–4

**ನಮೂನೆ – 1**

**ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನುಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ,**
**(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿಮಾಡಬೇಕಾದ ನಮೂನೆ)**

ಗೆ:

ತಹಸೀಲ್ದಾರ್‌ರವರಿಗೆ
__________________ ತಾಲ್ಲೂಕು
_________________ ಜಿಲ್ಲೆ

ಮಾನ್ಯರೇ,

ಶ್ರೀ/ಶ್ರೀಮತಿ __________________________________ ಎಂಬುವವರ ಮಗ / ಮಗಳು / ಪತಿ / ಪತ್ನಿ ________________________________________ ಆದ ನಾನು ಮೇಲುಸ್ತರದಲ್ಲಿ(creamy layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿಗ್ರಾಮೀಣಅಭ್ಯರ್ಥಿ ಮಿಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲುತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತುಉದ್ಯೋಗ :
2. ಅಭ್ಯರ್ಥಿಯ ಸ್ವಂತ ಸ್ಥಳ
   ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ :
4. ಅಭ್ಯರ್ಥಿಯತಂದೆ/ತಾಯಿ/ಪೋಷಕರ/ಪತಿ/ಪತ್ನಿ ಹೆಸರು ಮತ್ತುಉದ್ಯೋಗ
   ಉದ್ಯೋಗವು ಸರ್ಕಾರಿ / ಅರೆ ಸರ್ಕಾರಿ :
   ಸಾರ್ವಜನಿಕ ಉದ್ದಿಮೆ :
   ಖಾಸಗಿ :
5. ಅಭ್ಯರ್ಥಿಯ ಪ್ರಸ್ತುತ ವಿಳಾಸ (ಸ್ಪಷ್ಟವಾಗಿ ನಮೂದಿಸುವುದು) :
6. ಅಭ್ಯರ್ಥಿಯಖಾಯಂ ಅಂಚೆ ವಿಳಾಸ :
7. ಅಭ್ಯರ್ಥಿಯ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ :
   ಮಾಧ್ಯಮಿಕ :
   ಪ್ರೌಢ :
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯತಂದೆ/ತಾಯಿ/ಪೋಷಕರ (ತಂದೆ/ತಾಯಿಜೀವಂತರಾಗಿರದಿದ್ದಲ್ಲಿ) ಪತಿ/ಪತ್ನಿಇವರಒಟ್ಟು ವಾರ್ಷಿಕಆದಾಯಎಲ್ಲ ಮೂಲಗಳಿಂದ :
   1. ವೇತನ (ವೇತನ ಶ್ರೇಣಿ) :
   2. ಜಮೀನಿನ ವಿವರಗಳು :
   3. ಇತರೆ ಮೂಲಗಳಿಂದ :
9. ಆದಾಯತೆರಿಗೆ ಪಾವತಿದಾರರೆ? :
10. ಸಂಪತ್ತುತೆರಿಗೆ ಪಾವತಿದಾರರೆ? ;
11. ಮಾರಾಟತೆರಿಗೆ ಪಾವತಿದಾರರೆ? :

**ಪ್ರಮಾಣೀಕೃತಘೋಷಣೆ**

ಈ ಮೇಲೆ ನನ್ನಿಂದಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಸ್ಥಳ :

ತಮ್ಮ ವಿಧೇಯ

ದಿನಾಂಕ:

(ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದುದೃಢಪಟ್ಟಲ್ಲಿಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ ಪೋಷಕರ ಸಹಿ
(ತಂದೆ/ತಾಯಿಜೀವಂತವಾಗಿರದಿದ್ದಲ್ಲಿ)
ಪತಿ /ಪತ್ನಿಇವರ ಸಹಿ

**ಇಬ್ಬರು ಸ್ಥಳೀಯ ಸಾಕ್ಷಿಗಳು**

ಅಭ್ಯರ್ಥಿಯ ಮತ್ತುತಂದೆ/ತಾಯಿ/ಪೋಷಕರ/ಪತಿ/ಪತ್ನಿಇವರನ್ನು ಹಾಗೂ ಇವರ ಸಹಿಯನ್ನು ನಾವು ಗುರುತಿಸುತ್ತೇವೆ:

ಸಾಕ್ಷಿಗಳ ಸಹಿ 1.

(ಪೂರ್ಣ ವಿಳಾಸದೊಂದಿಗೆ)

2.

**ಪರಿಶೀಲನಾ ಪ್ರಮಾಣ ಪತ್ರ**

1. ಶ್ರೀ/ಶ್ರೀಮತಿ : ________________________________ ಇವರ ಮಗ/ಮಗಳು/ಪತಿ/ಪತ್ನಿ ______________________________ ಶ್ರೀ/ಶ್ರೀಮತಿ/ ಕುಮಾರಿ ____________________________ ಎಂಬುವವರುಕರ್ನಾಟಕರಾಜ್ಯದ ______________ಜಿಲ್ಲೆಯ ವಿಭಾಗ____________________ ಗ್ರಾಮ/ಪಟ್ಟಣ/ ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತುಇವರುಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ: ________________________________ ಇವರ ಪೋಷಕರುಇವರು ಸರ್ಕಾರಿಆದೇಶ ಸಂಖ್ಯೆಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ: 31.01.1995 ರನ್ವಯಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ(creamy layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ : ತಹಸೀಲ್ದಾರ್

ದಿನಾಂಕ: ____________ ತಾಲ್ಲೂಕು

**ಸೂಚನೆ–1**

ಇದರಲ್ಲಿಉಪಯೋಗಿಸಲಾಗಿರುವ **"ಸಾಮಾನ್ಯ ನಿವಾಸಿ"** ಎಂಬ ಪದವು 1950ರ ಜನತಾ ಪ್ರಾತಿನಿಧ್ಯಕಾಯಿದೆಯ 20ನೇ ಅನುಚ್ಛೇದದಲ್ಲಿನಅರ್ಥವನ್ನು ಹೊಂದಿರುತ್ತದೆ.

**ಸೂಚನೆ–1**

ಪರಿಶೀಲನಾ ಪ್ರಮಾಣ ಪತ್ರ ನೀಡುವಅಧಿಕೃತಅಧಿಕಾರಿಯು ಸರ್ಕಾರಿಆದೇಶ ಸಂಖ್ಯೆ. ಎಸ್‌ಡಬ್ಲ್ಯೂಡಿ 251 ಬಿಸಿಎ 95, ಬೆಂಗಳೂರು ದಿನಾಂಕ: 31.01.1995 ರನ್ವಯ ಮೇಲುಸ್ತರದವರನ್ನುಗುರುತಿಸಲು ನಿಗಧಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

ಅನುಬಂಧ–5

ನಮೂನೆ – 2

ಗ್ರಾಮೀಣಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ________________________________ ರವರ ಮಗ/ಮಗಳು/ಪತಿ/ಪತ್ನಿ, ಶ್ರೀ/ಶ್ರೀಮತಿ/ಕುಮಾರಿ: ________________________ ಜಿಲ್ಲೆ _______________ ತಾಲ್ಲೂಕು _______________ ಗ್ರಾಮದಲ್ಲಿ ____________________ ವಾಸವಾಗಿರುವಇವರುಒಂದನೇತರಗತಿಯಿಂದ _____________ ತರಗತಿಯವರೆಗೆ _____________ ಜಿಲ್ಲೆ _________________ ತಾಲ್ಲೂಕು ___________________ ಪಟ್ಟಣ ಶಾಲೆಯಲ್ಲಿ ವ್ಯಾಸಂಗ ಮಾಡಿ ____________ ವರ್ಷ ನಡೆದ ಪರೀಕ್ಷೆಯಲ್ಲಿಉತ್ತೀರ್ಣರಾಗಿರುತ್ತಾರೆ. ಈ ಶಾಲೆಯುಅಭ್ಯರ್ಥಿಯು ವ್ಯಾಸಂಗ ಮಾಡಿದಅವಧಿಯಲ್ಲಿಕರ್ನಾಟಕದ ಪೌರ–ನಿಗಮಗಳ ಅಧಿನಿಯಮ, 1976 ಅಥವಾಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯುಲ್ಲಿ ನಿರ್ಧಿಷ್ಟಪಡಿಸಿದ ಒಂದುದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

(ಸಹಿ)

ಮುಖ್ಯೋಪಾಧ್ಯಾಯರು

ಮೇಲು ರುಜು

ಕ್ಷೇತ್ರ ಶಿಕ್ಷಣಾಧಿಕಾರಿ

**ಅನುಬಂಧ–6**

**ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ**

ಶ್ರೀ / ಶ್ರೀಮತಿ ________________________________ ರವರ ಮಗ / ಮಗಳು / ಪತ್ನಿ ಶ್ರೀ/ ಶ್ರೀಮತಿ / ಕುಮಾರಿ: ___________________________ ಜಿಲ್ಲೆ ___________ ತಾಲ್ಲೂಕು _________________ ಗ್ರಾಮದಲ್ಲಿ ____________________ ವಾಸವಾಗಿರುವಇವರು __________________ ತರಗತಿಯಿಂದ __________________ ತರಗತಿಯವರೆಗೆ ____________________ ಶೈಕ್ಷಣಿಕ ವರ್ಷದಿಂದ ______________ ಶೈಕ್ಷಣಿಕ ವರ್ಷದವರೆಗೆ _______________________________________ ಶಾಲೆಯಲ್ಲಿಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ದಿನಾಂಕ:___________ ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು

ಸ್ಥಳ :____________

**ಸೂಚನೆ:** ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಶಾಲಾವಾರು ಪ್ರತ್ಯೇಕ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ ಸಲ್ಲಿಸಬೇಕು

ಅನುಬಂಧ–7

__________ ಜಿಲ್ಲೆಯ _______. ತಾಲ್ಲೂಕಿನ ________________. ಗ್ರಾಮ / ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.

ಸ್ಥಳ–
ದಿನಾಂಕ:–

ಹೆಸರು ____________.
ಅಸಿಸ್ಟೆಂಟ್ ಕಮಿಷನರ್
ಉಪ ವಿಭಾಗ
ಜಿಲ್ಲೆ

ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಹೈದರಾಬಾದ್–ಕರ್ನಾಟಕ ಮೀಸಲಾತಿಗೆ ಸಲ್ಲಿಸಬೇಕಾದ ಪ್ರಮಾಣ ಪತ್ರ
ಅನುಬಂಧ–ಎ
ಸ್ವಗ್ರಾಮ ಪ್ರಮಾಣ ಪತ್ರ
(ಅನುಚ್ಛೇದ 371(ಜೆ) ಮೇರೆಗೆ)
(5(2)ನೇ ನಿಯಮ ನೋಡಿ)
(ಪ್ರಮಾಣ ಪತ್ರ ನೀಡಿಕೆಗಾಗಿಕರ್ನಾಟಕ ಸಆರ್ವಜನಿಕಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು 2013)

ಶ್ರೀ / ಶ್ರೀಮತಿ ___________________________.. ರವರು _________________________. ರವರ ಮಗ / ಹೆಂಡತಿಯಾಗಿದ್ದು, ಇವರುಕರ್ನಾಟಕರಾಜ್ಯದ _______________ ಜಿಲ್ಲೆಯ __________ ತಾಲ್ಲೂಕಿನ __________________._____. ಗ್ರಾಮ / ಪಟ್ಟಣವನ್ನುತನ್ನ ಸೇವಾ ಪುಸ್ತಕದಲ್ಲಿತನ್ನ ಸ್ವಗ್ರಾಮ / ಸ್ಥಳ ಎಂದು ಘೋಷಿಸಿರುತ್ತಾರೆ.

ಸೇವಾ ಪುಸ್ತಕದಲ್ಲಿರುವ ನಮೂದನ್ನು ನಾನು ಖುದ್ದಾಗಿ ಪರಿಶೀಲಿಸಿದ್ದೇನೆ ಮತ್ತು ನಮೂದು ದಿನಾಂಕ:01–02–2013ಕ್ಕೆ ಮುಂಚೆ ಸೇವಾ ಪುಸ್ತಕದಲ್ಲಿಇತ್ತೆಂದು ಸ್ವತಃ ಮನವರಿಕೆ ಮಾಡಿಕೊಂಡಿರುತ್ತೇನೆ.

ಸ್ಥಳ: ನೇಮಕಾತಿ ಪ್ರಾಧಿಕಾರಿಯವರ ಸಹಿ

ದಿನಾಂಕ: ಹೆಸರು:

ಪದನಾಮ:

ಅನುಬಂಧ–8

**GOVERNMENT OF KARNATAKA**
**DEPARTMENT OF SAINIK WELFARE AND RESETTLEMENT**

**Office of the Deputy Director,**
**Department of Sainik Welfare & Resettlement**
**(Karnataka)**

**No:** **Date:**

**CERTIFICATE**

**This is to certify that Sri/Smt/Kum………………………. is an applicant for ……………………… in Karnataka is the spouse/ son / daughter of No……….. Rank………. Name ……………………who died / was permanently disabled while in service according to the certificate issued by Defense Authority. He did/ was permanently disable on ……………**

**Home address of the individual at the time of joining Defense Service as per the records is:**

**Place:** **Signature of the Deputy Director**
**Date:** **Department of Sainik Welfare & Resettlement**
**District…………………..**

ಅನುಬಂಧ–9

ಕರ್ನಾಟಕ ಸರ್ಕಾರದಅಧಿಕೃತಜ್ಞಾಪನ ಸಂಖ್ಯೆ: ಸಿಆಸುಇ 115 ಸೇಸೇನಿ 2005, ದಿನಾಂಕ 19–11–2005

## CERTIFICATE FOR THE PERSONS WITH DISABILITIES

This is to certify that Sri/Smt/Kum……………………………………………………… son/wife/daughter of Shri…………………………………………… Age …………. old, male/female, Registration No………………………… is case of ……………………… He/She is physically disabled/visual disabled/speech & hearing disabled/Mental Retarded and has …………………………………………… % (…………………… percent)

Permanent (physical imparitment, visual impairment, speech & hearing impairment) in relation of his/her …………………………………..

Note :

1. This condition is progressive/non progressive/likely to improve/not improve. *
2. Re-assessment is not recommended/is recommended after a period of …………………………. Months/years.
   - Strike out which is not applicable.

(Recent Attested Photograph)

| | | |
|---|---|---|
| Sd/- | Sd/- | Sd/- |
| (Doctor) | (Doctor) | (Doctor) |
| Seal | SealSeal | |

Countersigned by the
Medical Superintendent CMO/Head
of Hospital (with seal)

Sigature /Thumb impression
Of the disabled person

**ಅನುಬಂಧ–10**

**ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು ಸಲ್ಲಿಸಬೇಕಾದ ನಿರಾಕ್ಷೇಪಣಾ ಪ್ರಮಾಣ ಪತ್ರ**

ಶ್ರೀ/ಶ್ರೀಮತಿ…………………………..ಆದಇವರುರಾಜ್ಯ / ಕೇಂದ್ರ ಸರ್ಕಾರದಲ್ಲಿ…………………………..(ಪದನಾಮ)……………………………… ಇಲಾಖೆಯಲ್ಲಿಖಾಯಂ/ತಾತ್ಕಾಲಿಕ ಹುದ್ದೆಯನ್ನುದಿನಾಂಕ:…………………ರಿಂದ ……………………………ರ ವರೆಗೆ ಹೊಂದಿರುವರು. ಇವರು 2015ನೇ ಸಾಲಿನಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆಗೆಅರ್ಜಿಅನುಮತಿ ನೀಡಿದೆ.

**ನೇಮಕಾತಿ ಪ್ರಾಧಿಕಾರಿಯವರ ಸಹಿ ಮತ್ತು ಮೊಹರು**

**ದಿನಾಂಕ:**

**ಸ್ಥಳ:**

CERTIFICATE TO BEFURNISGED BY THE STATE/CENTRAL GOVT SERVANTS

Certivied that Sri/Smt………………………………………………………………………………………… holds aPermanent/temporary Post under the State/Central Govt as………………………………………..(designation) in the Dept. of ……………………… from……………………………… to …………………………… He/She is permitted to apply for the Gazetted Probatiner's Examination 2015.

Signature of the Appointment Authority with Seal

Date:

Place:

5) ಪ.ಜಾ., ಪ.ಪಂ, ಪ್ರವರ್ಗ-I, ಪ್ರವರ್ಗ-IIಎ, ಪ್ರವರ್ಗ-IIಬಿ, ಪ್ರವರ್ಗ-IIIಎ ಮತ್ತು ಪ್ರವರ್ಗ-IIIಬಿ ಮೀಸಲಾತಿಕೋರಿದ್ದಲ್ಲಿ ಸಂಬಂಧಿತ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

6) ವಿಶೇಷ ಚೇತನರುಅಂಗವೈಕಲ್ಯದ ಬಗ್ಗೆ (ಶೇ. 40% LV (Low Vision) OL,BL (Locomotor Disablity) ಹಾಗೂ HI (Hearing Impairment), ಸೂಕ್ತ ಪ್ರಾಧಿಕಾರದಿಂದ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸುವುದು.

7) ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿಕೋರಿದ್ದಲ್ಲಿ).

8) ಕನ್ನಡ ಮಾಧ್ಯಮ / ಗ್ರಾಮೀಣಅಭ್ಯರ್ಥಿ ಮೀಸಲಾತಿ ಬಯಸುವವರುಅವಶ್ಯದಾಖಲಾತಿಒದಗಿಸುವುದು.

9) ಅರ್ಜಿಯಲ್ಲಿಇತ್ತೀಚಿನ ಪಾಸ್‌ಪೋರ್ಟ್ ಸೈಜಿನಎರಡು ಭಾವಚಿತ್ರಗಳನ್ನು ಸ್ಕ್ಯಾನ್ ಮಾಡಿಅಪ್‌ಲೋಡ್ ಮಾಡಿರಬೇಕು.

10) ಅರ್ಜಿ ಶುಲ್ಕವನ್ನುಜಮಾ ಮಾಡಿದ ಬಗ್ಗೆ ಚಲನ್ ಪ್ರತಿಯನ್ನುಅಪ್‌ಲೋಡ್ ಮಾಡುವುದು.

11) ಇಬ್ಬರುಗಣ್ಯ ವ್ಯಕ್ತಿಗಳಿಂದ ಪಡೆದಗುಣ ಮತ್ತು ನಡತೆ ಪ್ರಮಾಣ ಪತ್ರಗಳು ದ್ವಿಪ್ರತಿಗಳಲ್ಲಿ.

12) ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಯಾವುದೇಕಾರಣಕ್ಕೆ ಮ್ಯಾನ್ಯುಯಲ್‌ಅರ್ಜಿ ಸ್ವೀಕರಿಸಲಾಗುವುದಿಲ್ಲ ಹಾಗೂ ವಿಳಂಬ ಮಾಡಿ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ

13) ಈ ಹುದ್ದೆಗಳನ್ನು ಅನುಚ್ಛೇದ 371(ಜೆ) ರಂತೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ ಮೀಸಲಿರಿಸಿದೆ.

14) ಈ ಪ್ರಕಟಣೆ ಹಾಗೂ ಅರ್ಜಿ ನಮೂನೆಯಕುರಿತು ಹೆಚ್ಚಿನ ಮಾಹಿತಿಅವಶ್ಯವಿದ್ದಲ್ಲಿಆಯುಕ್ತರಕಛೇರಿಯಕೇಂದ್ರ ಸ್ಥಾನಿಕ ಸಹಾಯಕರು ಹಾಗೂ ಸಿಬ್ಬಂದಿ ಶಾಖೆ ಅಧೀಕ್ಷಕರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ. ---------- ಹಾಗೂ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವೆಬ್ ವಿಳಾಸ :**WWW.ahvs.kar.nic.in**ವನ್ನು ಸಂಪರ್ಕಿಸುವುದು.

**ಕರ್ನಾಟಕ ಸರ್ಕಾರ**

**ಆಯುಕ್ತರಕಾರ್ಯಾಲಯ, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, 1ನೇ ಮಹಡಿ, ಪಶುಪಾಲನಾ ಭವನ, ಸಿ.ಬಿ.ಐಕಛೇರಿಎದುರು, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560 024.**

**ಪ್ರಕಟಣೆ ಸಂಖ್ಯೆ:ಆಪಸಂ:ಎ-5:ವಿವ-02:2019-20 ಬೆಂಗಳೂರು ದಿನಾಂಕ:.------**

**ಆನ್ ಲೈನ್ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಲಾದಕೊನೆಯ ದಿನಾಂಕ: --------**

**ಅಧಿಸೂಚನೆ**

**ವಿಷಯ** **ಅನುಚ್ಛೇದ 371(ಜೆ) ರಂತೆಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಭರ್ತಿಯಾಗದೆ ಉಳಿದ 61 ಪಶುವೈದ್ಯಾಧಿಕಾರಿಗಳ ಹುದ್ದೆಯನ್ನುತುಂಬಲು ಅರ್ಜಿಗಳನ್ನು ಆಹ್ವಾನಿಸಿರುವುದು.**

ಈ ಕಛೇರಿಯಅಧಿಸೂಚನೆ ಸಂ. ದಿನಾಂಕ:-----2020 ರಲ್ಲಿ ನಮೂದಿಸಿರುವ ಅರ್ಜಿ ನಮೂನೆಯನ್ನುಆನ್ ಲೈನ್ ಮೂಲಕ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಭರ್ತಿಯಾಗದೆ ಉಳಿದ 61 ಪಶುವೈದ್ಯಾಧಿಕಾರಿಗಳ ಗ್ರೂಪ್-ಎ ಹುದ್ದೆಗಳಿಗೆ **ದಿನಾಂಕ: ---2020ರ ಸಂಜೆ 5.00 ಘಂಟೆಯೊಳಗಾಗಿಅರ್ಜಿಯನ್ನುಆನ್ ಲೈನ್ ಮುಖಾಂತರ ಭರ್ತಿ ಮಾಡಿ**, ಅರ್ಜಿಯ ಶುಲ್ಕವನ್ನುಕರ್ನಾಟಕರಾಜ್ಯದಯಾವುದೇ ಅಂಚೆ ಕಛೇರಿಗಳಲ್ಲಿ(e-payment Post Office only) ಅಲ್ಲಿ ಪಾವತಿಸಲು ತಿಳಿಸಿದೆ, ಇಲ್ಲವಾದಲ್ಲಿಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ನೇಮಕಾತಿಕುರಿತುಅಧಿಸೂಚನೆ, ಅರ್ಜಿ ನಮೂನೆ ಮತ್ತು ಅಡಕಗಳ ವಿವರಗಳಿಗಾಗಿ ಕರ್ನಾಟಕರಾಜ್ಯದ ದಿನಾಂಕ:-----ರಲ್ಲಿರಾಜ್ಯಪತ್ರದಲ್ಲಿಹಾಗೂ ಇಲಾಖಾ ವೆಬ್ ಸೈಟ್www.ahvs.kar.nic.inನಲ್ಲಿಪೂರ್ಣ ವಿವರಗಳನ್ನು ಪಡೆದುಕೊಳ್ಳಬಹುದು.

**ಆಯುಕ್ತರು**
**ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಹಾಗೂ**
**ಪದನಿಮಿತ್ತಅಧ್ಯಕ್ಷರು, ಇಲಾಖಾ ಆಯ್ಕೆ ಸಮಿತಿ, ಬೆಂಗಳೂರು**

**ವೆಬ್ ಸೈಟ್ ವಿಳಾಸ**

| ಕ್ರ.ಸಂ | ಇಲಾಖೆಯ ಹೆಸರು | ವೆಬ್ ಸೈಟ್ ವಿಳಾಸ |
|---|---|---|
| 1 | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ | www.ahvs.kar.nic.in |
| 2 | ಕರ್ನಾಟಕಕುರಿ ಮತ್ತುಉಣ್ಣೆಅಭಿವೃದ್ಧಿ ನಿಗಮ ನಿಯಮಿತ | www.karnataka.gov.in/kswd |
| 3 | ಕರ್ನಾಟಕಕುಕ್ಕುಟ ಮಹಾ ಮಂಡಳಿ | www.kcpfpoultry.org |
| 4 | ಕರ್ನಾಟಕ ಪಶುವೈದ್ಯಕೀಯ ಪರಿಷತ್ತು | www.kvcbangalore.com |